ಓ.ಎಸ್ ನಂ.**7091/2022**
ಡಿ.ಡಬ್ಲ್ಯೂ: **1**

**ದಿನಾಂಕಃ 22.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀಮತಿ. ಎಂ.ಎಲ್. ಶ್ರೀಮತಿ., ವಾದಿ ಪರ ವಕೀಲರಿಂದಃ-**

ನಾನು ಬಿ.ಎಸ್ಸಿ . ಓದಿರುತ್ತೇನೆ. ನನಗೆ ಈಗ 50 ವರ್ಷ ವಯಸ್ಸು. ವಾದಿ ನನಗಿಂತ 4 ವರ್ಷ ಚಿಕ್ಕವನು. ವಾದಿ ಎಂ.ಎಸ್ಸಿ. ಓದಿರುತ್ತಾನೆ. ನಾನು ಮತ್ತು ವಾದಿ ಇಬ್ಬರು ಕೂಡ ಇಂಗ್ಲೀಷ್ ಮೀಡಿಯಂ ನಲ್ಲಿ ಓದಿರುತ್ತೇವೆ ಎನ್ನುವುದು ನಿಜ. ನಾನು ಸಲ್ಲಿಸಿರುವ ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರ ಇವುಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ತಂದೆ 10 ನೇ ತರಗತಿಯವರೆಗೆ ಓದಿರುತ್ತಾನೆ. ನನ್ನ ತಂದೆ ಬಿ.ಕಾಂ. ಓದಿರುತ್ತಾನೆ ಎನ್ನುವುದು ಸರಿಯಲ್ಲ. ನನ್ನ ತಾಯಿಗೆ ಓದು ಬರಹ ಬರುವುದಿಲ್ಲ. ನನ್ನ ತಾಯಿ ಬುರ್ಕಾ ಧರಿಸಿ ಮನೆಯಲ್ಲಿರುತ್ತಾಳೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಅವಳು ಬುರ್ಕಾ ಧರಿಸುತ್ತಾಳೆ, ಆದರೆ ಎಲ್ಲಾ ಕಡೆಗೆ ಹೋಗಿ ಬರುತ್ತಾಳೆ ಎನ್ನುತ್ತಾರೆ. ನನ್ನ ತಾಯಿಗೆ ವ್ಯವಹಾರ ಜ್ಞಾನ ಇಲ್ಲ ಎನ್ನುವುದು ಸರಿಯಲ್ಲ. ನನ್ನ ತಾಯಿ ಉರ್ದು ಮತ್ತು ಅರೆಬಿಕ್ ಓದಿದ್ದಾಳೆ. ನನ್ನ ತಾಯಿಗೆ ಇಂಗ್ಲೀಷ್ ಓದು ಬರಹ ಬರುವುದಿಲ್ಲ ಎನ್ನುವುದು ಸರಿಯಲ್ಲ. ನನಗೆ ಮುಸ್ಲಿಂ ಕಾನೂನಿನ ಬಗ್ಗೆ ಗೊತ್ತಿಲ್ಲ. ಮುಸ್ಲಿಂ ಕಾನೂನಿನ ಪ್ರಕಾರ ಗಂಡು ಮಕ್ಕಳಿಗೆ, ಹೆಣ್ಣು ಮಕ್ಕಳಿಗೆ ಮತ್ತು ತಾಯಿಗೆ ಆಸ್ತಿಯಲ್ಲಿ ಎಷ್ಟೇಷ್ಟು ಭಾಗ ಬರುತ್ತದೆ ಎನ್ನುವುದು ನನಗೆ ಗೊತ್ತಿಲ್ಲ.

ನನಗೆ ಮದುವೆಯಾಗಿರುವುದಿಲ್ಲ. ನಾನು ನನ್ನ ತಂದೆ ತೀರಿಕೊಳ್ಳುವವರೆಗೆ ಆತನ ಜೊತೆಯಲ್ಲಿಯೇ ಇದ್ದೆ. ನನ್ನ ತಂದೆಯ ವ್ಯವಹಾರವನ್ನು ನಾನೇ ನೋಡಿಕೊಳ್ಳುತ್ತಿದ್ದೆ ಎನ್ನುವುದು ಸರಿಯಲ್ಲ. ನನ್ನ ತಂದೆಗೆ 2009-10 ರಿಂದ ಆರೋಗ್ಯ ಸಮಸ್ಯೆ ಉಂಟಾಗಿತ್ತು. 2009 ಕ್ಕಿಂತ ಮುಂಚೆಯಿಂದಲು ನನ್ನ ತಂದೆಗೆ ಸಕ್ಕರೆ ಕಾಯಿಲೆ ಇತ್ತು. ತೀವ್ರತರಹದ ಸಕ್ಕರೆ ಕಾಯಿಲೆ ಇದ್ದಾಗ ಯಾವುದೇ ವ್ಯವಹಾರದ ಬಗ್ಗೆ ಗಮನವಿರುವುದಿಲ್ಲ ಎನ್ನುವುದು ಸರಿಯಲ್ಲ. ನನ್ನ ತಂದೆ ತಾಯಿಗೆ ನನ್ನ ಅಜ್ಜ-ಅಜ್ಜಿ ಅಂದರೆ ನನ್ನ ತಂದೆಯ ತಂದೆ ತಾಯಿ 100 ಗ್ರಾಂ ಬಂಗಾರ ಕೊಟ್ಟಿದ್ದರು ಎಂದರೆ ಸಾಕ್ಷಿ 100 ಗ್ರಾಂ ಇರಲಿಲ್ಲ ಅದಕ್ಕಿಂತ ಕಡಿಮೆಯಿತ್ತು ಎನ್ನುತ್ತಾರೆ. 2008 ರಲ್ಲಿ ವಾದಿ ಕೆಲಸಕ್ಕೆಂದು ನೆಲಮಂಗಲಕ್ಕೆ ಹೋಗಿದ್ದ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನೆಲಮಂಗಲಕ್ಕೆ ಕೆಲಸಕ್ಕೆ ಹೋಗುತ್ತಿದ್ದೇನೆ ಎಂದು ಸುಳ್ಳು ಹೇಳಿ ನೆಲಮಂಗಲಕ್ಕೆ ಹೋಗುತ್ತಿದ್ದ ಎನ್ನುತ್ತಾರೆ.

ಓ.ಎಸ್ ನಂ.**7091/2022**
ಡಿ.ಡಬ್ಲ್ಯೂ: **1**

ನನ್ನ ತಂದೆಗೆ ಸೆಟಲ್ ಮೆಂಟ್ ಡೀಡ್ ಪ್ರಕಾರ 2 ಆಸ್ತಿಗಳು ಬಂದಿವೆ. ಇನ್ನೊಂದು ಅಂಗಡಿ ನನ್ನ ತಂದೆಗೆ ಆತನ ತಂದೆಯಿಂದ ಬಂದಿದೆ. ಈ ಮೂರು ಆಸ್ತಿ ಬಿಟ್ಟು ನನ್ನ ತಂದೆಗೆ ಬೇರೆ ಆಸ್ತಿಗಳು ಇರಲಿಲ್ಲ. ದಾವಾ ಶೆಡ್ಯೂಲ್ ಎ ಆಸ್ತಿಯ ದಿಃ 24.12.2008 ರ ನೊಂದಾಯಿತ ದಾನಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಏನಾದರು ತೊಂದರೆ ಇದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿ ಅದನ್ನು ನಾನು ಏಕೆ ಹಾಜರು ಪಡಿಸಬೇಕು ಎನ್ನುತ್ತಾರೆ. ಆ ದಾನಪತ್ರವನ್ನು ನಾನು ಸೃಷ್ಟಿ ಮಾಡಿರುವುದರಿಂದ ಅದನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತಿಲ್ಲ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಅದನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೇಳಿದರು, ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಬಿ.ಪಿ.ದೇವಮಾನೆ )**
**1ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**